ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 600
2. ಸದಸ್ಯರ ಹೆಸರು : ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್)
3. ಉತ್ತರಿಸಬೇಕಾದ ದಿನಾಂಕ : 04-03-2021

ಕ್ರ ಸಂ	ಪ್ರಶ್ನೆಗಳು	ಉತ್ತರಗಳು
ಅ	ಉಮ್ಮತ್ತೂರು ದೊಡ್ಡಕೆರೆಗೆ ನದಿ ಮೂಲದಿಂದ ನೀರು ತುಂಬಿಸುವ ಕಾಮಗಾರಿ ಯಾವಾಗ ಆರಂಭವಾಯಿತು; ಈ ಯೋಜನೆಯ ಅಂದಾಜು ವೆಚ್ಚ ಎಷ್ಟು; ಇದುವರೆಗೆ ಎಷ್ಟು ಕಾಮಗಾರಿ ಮುಕ್ತಾಯವಾಗಿದೆ; ಉಳಿದಿರುವ ಕಾಮಗಾರಿಯನ್ನು ಯಾವಾಗ ಮುಗಿಸಲಾಗುವುದು; ಕೆರೆಗೆ ಎಂದಿನಿಂದ ನೀರು ಹರಿಸಿ ತುಂಬಿಸಲಾಗುವುದು;	ಕಬಿನಿ ನದಿಯಿಂದ ನೀರನ್ನು ಎತ್ತಿ ನಂಜನಗೂಡು, ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕುಗಳ ಒಟ್ಟು 24 ಕೆರೆಗಳಿಗೆ ಎರಡು ಹಂತಗಳಲ್ಲಿ ನೀರೆತ್ತಿ ಕುಡಿಯುವ ಉದ್ದೇಶಕ್ಕಾಗಿ ಕೆರೆ ತುಂಬಿಸುವ ರೂ.233.00 ಕೋಟಿ ಅಂದಾಜು ಮೊತ್ತದ ಸುತ್ತೂರು ಏತ ಯೋಜನೆಯ ಮೊದಲನೇ ಹಂತದಡಿ ಉಮ್ಮತ್ತೂರು ದೊಡ್ಡ ಕೆರೆಯನ್ನು ತುಂಬಿಸಲು ಯೋಜಿಸಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಸೆಪ್ಟೆಂಬರ್ 2017 ರಲ್ಲಿ ಪ್ರಾರಂಭಿಸಲಾಗಿದ್ದು, ರೂ.186.24 ಕೋಟಿಗಳ ಗುತ್ತಿಗೆ ಮೊತ್ತಕ್ಕೆ ಎದುರಾಗಿ ಇದುವರೆವಿಗೂ ರೂ.178.15 ಕೋಟಿ ವೆಚ್ಚ ಮಾಡಲಾಗಿರುತ್ತದೆ. ಎರಡೂ ಹಂತದ ಪಂಪ್‌ಹೌಸ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಒಟ್ಟು 50.07 ಕಿ.ಮೀ ಉದ್ದದ ಪೈಪ್‌ಲೈನ್ ಕಾಮಗಾರಿಗಳ ಪೈಕಿ 46.97 ಕಿ.ಮೀ ಉದ್ದದ ಕಾಮಗಾರಿ ಪೂರ್ಣಗೊಂಡಿದ್ದು, ಉಳಿದಿರುವ ಪೈಪ್‌ಲೈನ್ ಕಾಮಗಾರಿಗಳು ಹಾಗೂ ಸಬ್ ಸ್ಟೇಷನ್‌ನಲ್ಲಿ ವಿದ್ಯುತ್ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಯೋಜನೆಗೆ ಸಂಬಂಧಿಸಿದ ಕಾಮಗಾರಿಗಳನ್ನು ಏಪ್ರಿಲ್ 2021 ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಿದ್ದು, ಮೊದಲನೇ ಹಂತವನ್ನು ಏಪ್ರಿಲ್ 2021 ರ ಅಂತ್ಯದೊಳಗೆ ಚಾಲನೆಗೊಳಿಸಿ, ಈ ಹಂತದಲ್ಲಿ ಬರುವ ಉಮ್ಮತ್ತೂರು ಕೆರೆ ಸೇರಿದಂತೆ 11 ಕೆರೆಗಳಿಗೆ ನೀರನ್ನು ಹರಿಸಲು ಕ್ರಮವಹಿಸಲಾಗುತ್ತಿದೆ.
ಆ	ಕೆರೆಗೆ ನೀರು ಹರಿಸುವ ಮುನ್ನ ಕೆರೆಯ ಹೂಳು ತೆಗೆದು ಏರಿ ಮತ್ತು ಕೋಡಿಗಳನ್ನು ದುರಸ್ಥಿ ಮಾಡಿ ಭದ್ರಪಡಿಸಲು ಕ್ರಮ ಕೈಗೊಳ್ಳಲಾಗಿದೆಯೇ?	ಚಾಮರಾಜನಗರ ತಾಲ್ಲೂಕಿನ ಉಮ್ಮತ್ತೂರು ದೊಡ್ಡಕೆರೆಯು ಸಣ್ಣ ನೀರಾವರಿ ಇಲಾಖೆಗೆ ಸೇರಿದ್ದು, ರೂ.100.00 ಲಕ್ಷಗಳ ಅಂದಾಜು ಮೊತ್ತದೊಂದಿಗೆ ಸದರಿ ಕೆರೆಯ ಅಭಿವೃದ್ಧಿ ಕಾಮಗಾರಿಯನ್ನು 2018-19ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆ ವತಿಯಿಂದ ಕೈಗೊಳ್ಳಲಾಗಿದ್ದು, ಕೆರೆಯ ಏರಿ ಮತ್ತು ಕೋಡಿಗಳನ್ನು ದುರಸ್ತಿಪಡಿಸಲಾಗಿರುತ್ತದೆ ಹಾಗೂ ಕೆರೆಯ ಅಂಗಳದಲ್ಲಿನ ಹೂಳು ತೆಗೆಯುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಸಂಖ್ಯೆ:ಜಸಂಇ 33 ಎನ್‌ಎಲ್‌ಎ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ